**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ12.01.2026**

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಡಿ ಎಸ್ ವಕೀಲರಿಂದ**

ನಾನು ಹಾಜರುಪಡಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಮತ್ತು ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಾನು ರಾಜಕೀಯದಲ್ಲಿ ಇದ್ದು, 1 ನೇ ವಾದಿ 1978 ರಿಂದ ನನ್ನ ಜೊತೆಯಲ್ಲಿ ಇದುದ್ದರಿಂದ ನನಗೆ ಪರಿಚಯವಿರುತ್ತಾರೆ. 1 ನೇ ವಾದಿ ನಮ್ಮ ಕುಟುಂಬದಲ್ಲಿ ಬರಹಗಾರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ನಮ್ಮ ಸಹೋದರರ ನಡುವೆ 1994 ರ ಏಪ್ರಿಲ್ ತಿಂಗಳಲ್ಲಿ ವಿಭಾಗವಾಗಿರುತ್ತದೆ. 1994 ರಲ್ಲಿ ವಿಭಾಗವಾದ ನಂತರ 1 ನೇ ವಾದಿ ನಮ್ಮ ಕುಟುಂಬದ ಜಮೀನು ಉಸ್ತುವಾರಿ ಕೆಲಸದಿಂದ ಬಿಟ್ಟುಹೋಗಿರುತ್ತಾರೆಂದರೆ ಸಾಕ್ಷಿ ಅವರು ಯಾವುದೇ ಕೆಲಸಕ್ಕೆ ಸೇರಿರಲಿಲ್ಲ ಎಂದು ನುಡಿಯುತ್ತಾರೆ.

ದಾವ ಆಸ್ತಿ ಮೃತ 1 ನೇ ವಾದಿಗೆ ಮಂಜೂರಾಗಿದ್ದ ಸ್ವತ್ತು ಎಂದರೆ ಸರಿ. ದಾವ ಆಸ್ತಿ 1 ನೇ ವಾದಿ ಹೆಂಡತಿ ಮಕ್ಕಳ ಜೊತೆ ಒಟ್ಟು ಕುಟುಂಬದಲ್ಲಿ ಇದ್ದಾಗ ಮಂಜೂರಾಗಿತ್ತು ಎಂದರೆ ಸರಿ. ನಾನು ಹಕ್ಕು ಪತ್ರವನ್ನು ನೋಡಿರುತ್ತೇನೆ. ಸದರಿ ಹಕ್ಕು ಪತ್ರದಲ್ಲಿ 1 ನೇ ವಾದಿಯವರ ಕುಟುಂಬಕ್ಕೆ, ವಾರಸುದಾರರಿಗೆ ಮತ್ತು ಪ್ರತಿನಿಧಿಗಳಿಗೆ ಎಂದು ನಮೂದಿಸಿ ಹಕ್ಕು ಪತ್ರ ನೀಡಿರುತ್ತಾರೆಂದರೆ ಸರಿ. ಹಕ್ಕು ಪತ್ರದಂತೆ ದಾವ ಆಸ್ತಿ ಅವರ ಹೆಸರಿಗೆ ಬಂದು ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿ ದಾಖಲಾತಿ ಅವರ ಹೆಸರಿನಲ್ಲಿ ಇತ್ತು. ಆದರೆ ಸ್ವಾಧೀನದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆದರೆ ನಾಮಕಾವಸ್ಥೆ ಸ್ವಾಧೀನದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ದಾವ ಆಸ್ತಿ ಪಾಳು ಜಮೀನು ಎಂದು ನುಡಿಯುತ್ತಾರೆ.

1994-95 ರಲ್ಲಿ ಕರಾರು ಪತ್ರ ಆದ 2-3 ದಿನಗಳ ಹಿಂದೆ ಮಾತುಕತೆಯಾಗಿರುತ್ತದೆ. ಕ್ರಯದ ಕರಾರು ಪತ್ರ ರೂ 38000/- ಕ್ಕೆ ಮಾತುಕತೆಯಾಗಿರುತ್ತದೆ. ಆದರೆ ನನಗೆ ನಿಖರವಾಗಿ ಗೊತ್ತಿಲ್ಲ. ಆದರೆ ಚೆಕ್ ಮೂಲಕ ಹಣ ನೀಡಿರುತ್ತೇವೆ. ಚೆಕ್ ಮೂಲಕ ಹಣ ನೀಡಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿರುವ ಬಗ್ಗೆ ನೆನಪಿಲ್ಲ. ನಾನು ಸದರಿ ಖಾತೆಯ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ಮೊದಲು ಕ್ರಯದ ಕರಾರು ಪತ್ರ ಆದ ನಂತರ ಸಾಮಾನ್ಯ ಅಧಿಕಾರ ಪತ್ರವಾಗಿರುತ್ತದೆ. ಕ್ರಯದ ಕರಾರು ಪತ್ರದಲ್ಲಿ ಆ ದಿನವೇ 2 ನೇ ಪ್ರತಿವಾದಿಗೆ ದಾವ ಆಸ್ತಿಯ ಸ್ವಾಧೀನ ಹಸ್ತಾಂತರಿಸಿರುವುದಾಗಿ ನಮೂದಾಗಿದೆ ಎಂದರೆ ಸರಿ. ಸದರಿ ಕರಾರು ಪತ್ರ 1 ನೇ ವಾದಿಯ ಅಪ್ರಾಪ್ತ ಮಕ್ಕಳ ಸಹಿತ ಪತ್ರವಾಗಿರುತ್ತದೆ ಎಂದರೆ

ಸರಿ. 1 ನೇ ವಾದಿಯ ಅಪ್ರಾಪ್ತ ಮಕ್ಕಳಿಗೂ ಸಹ ಹಕ್ಕು ಇರುವುದರಿಂದ ಅವರನ್ನು ಕರಾರು ಪತ್ರದಲ್ಲಿ ತೋರಿಸಿರುತ್ತಾರೆಂದರೆ ಸರಿ.

ಕರಾರು ಪತ್ರದಲ್ಲಿ 15 ವರ್ಷಗಳ ಪರಭಾರೇ ಷರತ್ ನ್ನು ನಮೂದಿಸಿಲ್ಲ ಎಂದರೆ ಸಾಕ್ಷಿ ಕ್ರಯ ಪತ್ರ ಮಾಡಿಕೊಳ್ಳುವ ಸಲುವಾಗಿ ಉಪನೋಂದಾಣಿಧಿಕಾರಿ ಕಚೇರಿಗೆ ಹೋದಾಗ ಸದರಿ ಆಸ್ತಿ 15 ವರ್ಷಗಳ ಪರಭಾರೆ ಷರತ್ತಿಗೆ ಒಳಪಟ್ಟಿರುತ್ತದೆ ಎಂದು ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಆದ್ದರಿಂದ ಆನಂತರದಲ್ಲಿ ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತೇವೆಂದರೆ ಸಾಕ್ಷಿ ನಿಖರವಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರ ಮಾಡುವ ಸಮಯಕ್ಕೆ ಪರಭಾರೇ ಷರತ್ತು ಜಾರಿಯಲ್ಲಿ ಇತ್ತು ಎಂದರೆ ಸರಿ. ಕ್ರಯದ ಕರಾರು ಆದ ದಿನದಿಂದಲೇ ದಾವ ಆಸ್ತಿಯ ಸ್ವಾಧೀನ 2 ನೇ ಪ್ರತಿವಾದಿಗೆ ಬಂದಿರುತ್ತದೆ. ಜಿ ಪಿ ಎ ಆಧಾರದಲ್ಲಿ ಜಮೀನಿನ ಸ್ವಾಧೀನ ನನಗೆ ಬಂದಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಮತ್ತು 2 ನೇ ಪ್ರತಿವಾದಿ ಒಟ್ಟಾಗಿ ಇರುವುದರಿಂದ ಸ್ವಾಧೀನ ನಮ್ಮಿಬ್ಬರಿಗೂ ಸೇರಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಮ್ಮಿಬ್ಬರಿಗೂ ಸೇರಿ ಸ್ವಾಧೀನ ಬಂದಿರುತ್ತದೆಂದು ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಿಸಿರುವುದಿಲ್ಲ.

ನಾನು ಹಾಜರುಪಡಿಸಿರುವ ಜಿ ಪಿ ಎ ಯಲ್ಲಿ ದಾವ ಆಸ್ತಿ ನನ್ನ ವೈಯಕ್ತಿಕ ಸ್ವಾಧೀನಕ್ಕೆ ನೀಡಿರುವ ಬಗ್ಗೆ ನಮೂದು ಇದೆ ಎಂದರೆ ಸರಿ. ಕ್ರಯದ ಕರಾರು ಪತ್ರದಲ್ಲಿ 2 ನೇ ಪ್ರತಿವಾದಿಯ ವೈಯಕ್ತಿಕ ಸ್ವಾಧೀನಕ್ಕೆ ನೀಡಿರುವ ಬಗ್ಗೆ ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವಿಬ್ಬರೂ ಗಂಡ ಹೆಂಡತಿ ಇರುವುದರಿಂದ ಸದರಿ ಸ್ವಾಧೀನ ನಮ್ಮಗಿಬ್ಬರಿಗೂ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಿಃ 23.09.2000 ರಲ್ಲಿ ಕ್ರಯ ಪತ್ರ ನೋಂದಣಿಯಾಗಿರುತ್ತದೆ ಎಂದರೆ ಸರಿ. ದಿಃ 18.04.1994 ರ ಜಿ ಪಿ ಎ ಯಲ್ಲಿ ನೋಟರಿ ನೋಂದಣಿಯ ಸಂಖ್ಯೆ ನಮೂದಾಗಿಲ್ಲ ಎಂದರೆ ಗೊತ್ತಿಲ್ಲ. ದಿಃ 23.09.2000 ದಲ್ಲಿನ ಕ್ರಯ ಪತ್ರದಲ್ಲಿನ ದಿಃ 18.04.1994 ರ ಕ್ರಯದ ಕರಾರು ಪತ್ರದ ಬಗ್ಗೆ ನಮೂದಾಗಿದೆ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಕ್ರಯದ ಕರಾರು ಪತ್ರದ ಬಗ್ಗೆ ದಸ್ತುರರು ಮಾಹಿತಿ ನೀಡಿರುವುದಿಲ್ಲ ಮತ್ತು ಕರಾರು ಪತ್ರದ ಬಗ್ಗೆಯೂ ಸಹ ಅವಶ್ಯಕತೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಒಂದು ವೇಳೆ ದಿಃ 18.04.1994 ರಲ್ಲಿ ಕ್ರಯದ ಕರಾರು ಪತ್ರ ಆಗಿದ್ದ ಪಕ್ಷದಲ್ಲಿ ದಿಃ 23.09.2000 ರದಲ್ಲಿ ಕ್ರಯ ಪತ್ರದಲ್ಲಿ ನಮೂದು ಮಾಡಬೇಕಾಗಿತ್ತು ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

ದಿಃ 23.09.2000 ಕ್ರಯ ಪತ್ರದಲ್ಲಿ 2 ನೇ ಪುಟದಲ್ಲಿ ಕ್ರಯ ಪತ್ರ ಆಗುವ ಕಾಲಕ್ಕೆ 1 ನೇ ವಾದಿಯ ಮಾಲೀಕತ್ವ ಸ್ವಾಧೀನದಲ್ಲಿ ದಾವ ಆಸ್ತಿ ಇತ್ತು ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಸ್ತುರರು ಸಾಮಾನ್ಯವಾಗಿ ಎಲ್ಲ ಕ್ರಯ ಪತ್ರದಂತೆ ಅದನ್ನು ಸಹ ಬರೆದಿರುತ್ತಾರೆಂದು ನುಡಿಯುತ್ತಾರೆ. ಕ್ರಯ ಪತ್ರವನ್ನು ಓದಿದ ನಂತರ ನಾನು ಮತ್ತು ನನ್ನ ಹೆಂಡತಿ ಸಹಿ ಮಾಡಿರುತ್ತೇವೆ. ಕ್ರಯ ಪತ್ರವನ್ನು ಒಪ್ಪಿದ ನಂತರ ಸಹಿ ಮಾಡಿರುತ್ತೇವೆ. ಕ್ರಯ ಪತ್ರದ 2 ನೇ ಪುಟದ ಕೊನೆಯಲ್ಲಿ ಕ್ರಯ ಪತ್ರದ ದಿನ ದಾವ ಆಸ್ತಿಯ ಸ್ವಾಧೀನ 2 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುವ ಹಾಗೇ ನಮೂದು ಇದೆ ಎಂದರೆ ಸರಿ. ಕ್ರಯ ಪತ್ರದಲ್ಲಿ ಕ್ರಯ ಪತ್ರವಾದ ಸಂದರ್ಭದಲ್ಲಿ ಕ್ರಯದ ಮಾತುಕತೆಯಾಗಿದೆ ಎಂದು ಒಕ್ಕಣೆ ಇರುತ್ತದ ಎಂದರೆ ಸರಿ. ಕ್ರಯ ಪತ್ರದಲ್ಲಿ ಕ್ರಯದ ಪ್ರತಿಫಲಾ 78 ಸಾವಿರ ಎಂದು ಇದೆ ಎಂದರೆ ಸರಿ. ಕ್ರಯದ ಕರಾರು ಪತ್ರದಲ್ಲಿ 38 ಸಾವಿರ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕ್ರಯದ ಕಾಲಕ್ಕೆ ಎಸ್ ಆರ್ ಮೌಲ್ಯದ ಪ್ರಕಾರ ನಮೂದು ಮಾಡುತ್ತಾರೆ ಎಂದು ನಮೂದು ಮಾಡುತ್ತಾರೆ ಎಂದು ನುಡಿಯುತ್ತಾರೆ.

ಕ್ರಯದ ಕರಾರು ಪತ್ರದಲ್ಲಿನ ಮೌಲ್ಯ 38 ಸಾವಿರ ಹಾಗೂ ಮಾರುಕಟ್ಟೆ ಮೌಲ್ಯ 78 ಸಾವಿರ ಇದೆ ಎಂದು ಕ್ರಯ ಪತ್ರದಲ್ಲಿ ನಮೂದು ಮಾಡಿಲ್ಲ. 1 ನೇ ವಾದಿಗೆ ಕ್ರಯದ ಕರಾರು ಕಾಲಕ್ಕೆ 38 ಸಾವಿರ ನೀಡಿರುತ್ತೇವೆ. ಆನಂತರದಲ್ಲಿಯೂ ಸಹ ಹಣವನ್ನು ನೀಡಿರುತ್ತೇವೆ. ಆದರೆ ಎಷ್ಟು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ವಿಚಾರವನ್ನು ನನ್ನ ಪ್ರಮಾಣ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ. ಕ್ರಯ ಪತ್ರದಲ್ಲಿ 78 ಸಾವಿರ ಹಣವನ್ನು ಯಾವ ಯಾವ ಸಮಯಕ್ಕೆ ನೀಡಿರುತ್ತೇವೆಂದು ಬರೆಸಿರುವುದಿಲ್ಲ. ಕ್ರಯ ಪತ್ರದ ಬರವಣಿಗೆಯನ್ನು ನಾನೇ ಮಾಡಿಸಿರುತ್ತೇನೆ. ಹೆಚ್ಚುವರಿ 40 ಸಾವಿರ ಹಣವನ್ನು 1 ನೇ ವಾದಿಗೆ ಪಾವತಿಸಿರುವ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ಕ್ರಯ ಕರಾರಿನಲ್ಲಿ ನಮೂದಿಸಿರುವ ಪ್ರತಿಫಲಾಕ್ಕೂ ಮತ್ತು ಕ್ರಯ ಪತ್ರದಲ್ಲಿ ನಮೂದಿಸಿರುವ ಪ್ರತಿಫಲಾಕ್ಕೂ ಮತ್ತು ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಪ್ರತಿಫಲಾಕ್ಕೂ ವ್ಯತ್ಯಾಸ ಇದೆ ಎಂದರೆ ಸರಿ.

ನಾನು ಹಾಜರುಪಡಿಸಿರುವ ಜಿ ಪಿ ಎ ನೋಂದಣಿಯಾಗಿಲ್ಲ ಎಂದರೆ ಸರಿ. ನೋಂದಣಿಯಾಗದ ಜಿ ಪಿ ಎ ಆಧಾರದಲ್ಲಿ ಯಾವುದೇ ಆಸ್ತಿ ನೋಂದಣಿ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಜಿ ಪಿ ಎ ಮತ್ತು ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ 1 ನೇ ವಾದಿಯ ಮೈನರ್

ಮಕ್ಕಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ಕ್ರಯ ಪತ್ರದ ಕಾಲಕ್ಕೆ 1 ನೇ ವಾದಿಯ ಮಕ್ಕಳನ್ನು ಸೇರಿಸಿಕೊಂಡು ಕ್ರಯ ಪತ್ರ ಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ ಅವರೆಲ್ಲರೂ ಊರು ಬಿಟ್ಟು ಹೋಗಿದ್ದರು ಎಂದು ನುಡಿಯುತ್ತಾರೆ. ಸರ್ವಮಂಗಳರವರಿಂದ ಮಲ್ಲೇಗೌಡರಿಗೆ ಆದ ಕ್ರಯ ಪತ್ರದ ಸಮಯದಲ್ಲಿ ವಾರಸುದಾರರ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತೇವೆ ಎಂದರೆ ಸರಿ. ರವೀಂದ್ರ ಕುಮಾರ ರವರಿಂದ ಕ್ರಯ ಪತ್ರ ಮಾಡಿಕೊಳ್ಳುವಾಗ ಮಾಹಿತಿ ಇರಲಿಲ್ಲ.

ದಾವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಒಂದು ವೇಳೆ ಕ್ರಯದ ಕರಾರು ಪತ್ರವಾಗಿದ್ದರೆ ಮತ್ತು ಮುಂಗಡ ಹಣವನ್ನು ಮತ್ತು ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದರೆ ಅದನ್ನು ಕ್ರಯಪತ್ರದಲ್ಲಿ ನಮೂದಿಸುತ್ತಿದ್ದರು, ಆದರೆ ಯಾವುದೇ ಕ್ರಯದ ಕರಾರು ಪತ್ರ ಅಥವಾ ಮೊಬ್ಬಲಗು ಅಥವಾ ಸ್ವಾಧೀನ ಬಿಟ್ಟುಕೊಡಾದ ಕಾರಣ ಅದನ್ನು ಕ್ರಯ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಿ ಪಿ ಎ ನಲ್ಲಿ ದಾವ ಆಸ್ತಿಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಷರ ಇರುತ್ತದೆ ಎಂದರೆ ಸರಿ. 23.09.2000 ಕ್ರಯ ಪತ್ರದ ಸಮಯದಲ್ಲಿ ಸಹ ಪಾಳು ಜಮೀನು ಆಗಿತ್ತು ಎಂದು ನಮೂದು ಮಾಡಿರುತ್ತೇವೆಂದರೆ ಸರಿ. ಒಂದು ವೇಳೆ ಕ್ರಯದ ಕರಾರು ಪತ್ರ ಅಥವಾ ಜಿ ಪಿ ಎ ಮತ್ತು ಮುಂಗಡ ಹಣವನ್ನು ಮತ್ತು ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದರೆ ಅದನ್ನು ಕ್ರಯಪತ್ರದಲ್ಲಿ ನಮೂದಿಸುತ್ತಿದ್ದರು, ಆದರೆ ಯಾವುದೇ ಕ್ರಯದ ಕರಾರು ಪತ್ರ ಅಥವಾ ಮೊಬ್ಬಲಗು ಅಥವಾ ಸ್ವಾಧೀನ ಬಿಟ್ಟುಕೊಡಾದ ಕಾರಣ ಯಾವುದೇ ಜಿ ಪಿ ಎ ಆಗಿಲ್ಲ ಮತ್ತು ಜಮೀನನ್ನು ಅಭಿವೃದ್ಧಿ ಪಡಿಸಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**